ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಿಗ್ಗಾಂವ.

ಅಪರಾಧ ಮೊಕದ್ದಮೆ ಸಂಖ್ಯೆಃ 218/2023

ಫಿರ್ಯಾಧಿದಾರಃ ಶ್ರೀ ನಾಗಪ್ಪ ತಂದೆ ಬಸವಣ್ಣೆಪ್ಪ ವಾಲ್ಮೀಕಿ
ವಯಾಃ 42 ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಗಂಜೀಗಟ್ಟಿ, ತಾಃ ಶಿಗ್ಗಾಂವ, ಜಿಲ್ಲೆಃ ಹಾವೇರಿ.

- - ವಿರುದ್ಧ - -

ಆರೋಪಿಃ ಶ್ರೀ ಶರಣಯ್ಯ ತಂದೆ ಮಾರುದ್ರಯ್ಯ ಮಠಪತಿ

ಆ ಪಾ ದ ನೆ

ಶ್ರೀಮತಿ ಪೈರೋಜಾ ಹೆಚ್.ಉಕ್ಕಲಿ, ಬಿ.ಎ. ಎಲ್.ಎಲ್.ಎಂ., ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ., ಶಿಗ್ಗಾಂವ, ಆರೋಪಿತನ ಮೇಲೆ ಸಲ್ಲಿಸಿದ ಆಪಾದನೆ,

ಶ್ರೀ ಶರಣಯ್ಯ ತಂದೆ ಮಾರುದ್ರಯ್ಯ ಮಠಪತಿ
ವಯಾಃ 45 ವರ್ಷ, ಉಃ ವ್ಯಾಪಾರ,
ಸಾಃ ಕ್ಯಾಲಕೊಂಡ, ತಾಃ ಶಿಗ್ಗಾಂವ, ಜಿಲ್ಲೆಃ ಹಾವೇರಿ.

ಈ ಕೆಳಗಿನಂತೆಃ

ಆರೋಪಿತನಾದ ನಿಮಗೂ ಹಾಗೂ ಪಿರ್ಯಾದಿದಾರನಿಗೂ 6-7 ವರ್ಷಗಳಿಂದ ತುಂಬಾ ಪರಿಚಯ ಇದ್ದು ಹಾಗೂ ಪಿರ್ಯಾದಿದಾರನ ಮನೆಗೆ ನೀವು ಬರುವುದು ಹೋಗುವುದು ಮಾಡುತ್ತಿರುವುದರಿಂದ ಇಬ್ಬರ ನಡುವೆ ಒಳ್ಳೆಯ ಸಂಬಂಧ ಬೆಳೆದು ಪರಿಚಯವಾಗಿದ್ದು, ನಿಮ್ಮ ಹಾಗೂ ಪಿರ್ಯಾದಿಯ ಪರಿಚಯದಿಂದ, ಗೆಳೆತನದಿಂದ ಆಗಾಗ ನಿಮ್ಮ ಹಾಗೂ ಪಿರ್ಯಾದಿದಾರನ ಮದ್ಯೆ ಹಣದ ವ್ಯವಹಾರವು ನಡೆಯುತ್ತಿತ್ತು ಮತ್ತು ನೀವು ಗೋವಿನಜೋಳ ಮತ್ತು ಹತ್ತಿಯನ್ನು ಪಿರ್ಯಾದಿದಾರನ ಕಡೆಯಿಂದ ಪಡೆದುಕೊಂಡು ಹೆಚ್ಚಿನ ಲಾಭಕ್ಕಾಗಿ ಬೇರೆ ಕಡೆ ಮಾರಾಟ ಮಾಡಿ ಹಣವನ್ನು ಪಿರ್ಯಾದಿದಾರನಿಗೆ ಕೊಡುತ್ತಾ ಬಂದಿದ್ದು ಇದ್ದು, ಅದೇ ರೀತಿ ಪಿರ್ಯಾದಿದಾರನ ಕಡೆಯಿಂದ ಹತ್ತಿ ಮತ್ತು ಗೋವಿನಜೋಳ ತೆಗೆದುಕೊಂಡು ಮಾರಾಟ ಮಾಡಿ ರೂ. 5,00,000/- ಗಳನ್ನು ಕೊಡುತ್ತೇನೆ ಅಂತಾ ಹೇಳಿದ್ದು ಇದ್ದು, ನಂತರ ಪಿರ್ಯಾದಿದಾರನು 3 ತಿಂಗಳಾದ ನಂತರ ನಿಮ್ಮ ಕಡೆ ಬಂದು ರೂ. 5,00,000/- ಗಳನ್ನು ಮರಳಿ ಕೊಡುವಂತೆ ಕೇಳಿದಾಗ ನೀವು ಇಂದು ನಾಳೆ ಅಂತಾ ಮುಂದೂಡುತ್ತಾ ಬಂದಿದ್ದು ಇದ್ದು, ಕೊನೆಯ ಒಂದು ಸಾರಿ ಸಿಕ್ಕಾಗ ಆರೋಪಿತನಾದ

ನೀನು ದಿನಾಂಕಃ 30.12.2022 ರಂದು ನಿನ್ನ ಖಾತೆಯ ಐಡಿಎಫಸಿ ಬ್ಯಾಂಕ, ಶಿಗ್ಗಾಂವ ಶಾಖೆ ಚೆಕ್ ನಂ. 000003 ನೇದ್ದರಲ್ಲಿ ಚೆಕ್ ಮೊತ್ತ ರೂ. 5,00,000/- ನಮೂದಿಸಿ ಚೆಕ್ಕನ್ನು ನೀಡಿದ್ದು ಅದನ್ನು ನಗದೀಕರಣಕ್ಕಾಗಿ ಸಲ್ಲಿಸಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ (funds insufficient) ಅಂತಾ ಹೇಳಿ ಸದರ ಬ್ಯಾಂಕಿನವರು ಫಿರ್ಯಾದಿಗೆ ಚೆಕ್ಕನ್ನು ದಿಃ 04-01-2023 ರಂದು ಮರಳಿ ನೀಡಿದ್ದು, ಫಿರ್ಯಾದಿಯು ತನ್ನ ವಕೀಲರ ಮುಖಾಂತರ ನಿಮಗೆ ನೋಟೀಸು ನೀಡಿದ್ದರೂ ಕೂಡ ಸಹ ಚೆಕ್ ಹಣವನ್ನು ನೀವು ಇಂದಿನವರೆಗೂ ಮರಳಿ ಕೊಟ್ಟಿರುವುದಿಲ್ಲಾ. ಆ ಮೂಲಕ ವರ್ಗಾವಣೆ ಲಿಖಿತಗಳ ಅಧಿನಿಯಮ ಕಲಂ 138 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಗುನ್ಹೆ ಎಸಗಿರುತ್ತೀ ಅಂತಾ ಆಪಾದಿಸಲಾಗಿದೆ.

ಮೇಲ್ಕಂಡ ಅಪರಾಧಗಳು ನನ್ನ ಕಾರ್ಯ ಕಕ್ಷೆಯಲ್ಲಿ ಎಸಗಿರುವುದರಿಂದ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತೇನೆ.

ಶಿಗ್ಗಾಂವ.
ದಿನಾಂಕಃ 07.11.2023

(ಫೈರೋಜಾ ಹೆಚ್.ಉಕ್ಕಲಿ)
ಹಿರಿಯ ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು
ಶಿಗ್ಗಾಂವ.

## ಆರೋಪಿಯ ಉತ್ತರ

ಪ್ರಶ್ನೆ:1) ಈಗ ನಿನಗೆ ಓದಿ ಹೇಳಿದ ದೋಷಾರೋಪಣೆಯ/ಆಪಾದನೆಯ ಸಾರಾಂಶ ತಿಳಿಯತೇ?

ಉತ್ತರ: ತಿಳಿಯಿತು.

ಪ್ರಶ್ನೆ:2) ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ಯಾವುದಾದರೂ ಪ್ರತಿರಕ್ಷಣೆ ಇದೆಯಾ?

ಉತ್ತರ: ಒಪ್ಪಿಕೊಳ್ಳುವುದಿಲ್ಲ.

(ಈ ಮೇಲಿನ ಅಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ)

ಆರೋಪಿಯ ಸಹಿ

ಶಿಗ್ಗಾಂವ.
ದಿನಾಂಕ: 07.11.2023.

(ಫೈರೋಜಾ ಹೆಚ್.ಉಕ್ಕಲಿ)
ಹಿರಿಯ ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು
ಶಿಗ್ಗಾಂವ.